# ಸುನಂದಾ ಪುಷ್ಕರ್



ಒಮ್ಮಿಂದೊಮ್ಮೆಲೆ ಸುನಂದಾ ಪುಷ್ಕರ್ 'ಕ್ರಿಕೆಟ್ ರಾಜಕೀಯ'ದ ನಕ್ಷತ್ರವೆಂಬಂತೆ ಮಿನುಗ ತೊಡಗಿದ್ದಾರೆ. ವಾರದ ಹಿಂದೆ ಈಕೆಯ ಹೆಸರೇ ಯಾರಿಗೂ ಗೊತ್ತಿರಲಿಲ್ಲ. ಈಗ ಕ್ರಿಕೆಟ್–ರಾಜಕೀಯದ ಮೋಜಿನಲ್ಲಿ ಎಲ್ಲರ ನಾಲಗೆಯಲ್ಲೂ ಸುನಂದಾ ಹೆಸರು!

ಮೊದಲ ನೋಟಕ್ಕೇ ಮೋಹ ಹುಟ್ಟಿಸುವಂತಹ ಸೌಂದರ್ಯ ಹೊಂದಿರುವ ಈಕೆ ಕಾಶ್ಮೀರಿ ಸುಂದರಿ. ಅಪ್ಪ ಪಿ.ಎನ್.ದಾಸ್ ನಿವೃತ್ತ ಸೈನ್ಯಾಧಿಕಾರಿ. 1990ರಲ್ಲಿ ಕಾಶ್ಮೀರದಲ್ಲಿ ಪಂಡಿತರ ವಿರುದ್ಧ ದಾಳಿಗಳು ನಡೆದಾಗ, ಅಪ್ಪ–ಮಗಳು ಜಮ್ಮುವಿಗೆ ವಲಸೆ ಹೋದರು. ಅಲ್ಲಿಂದೀಚೆಗೆ ಜಮ್ಮುವಿನಲ್ಲೇ ಅಪ್ಪನ ವಾಸ. ಆದರೆ ಸುನಂದಾ ಇರುವುದು ದೂರದ ನ್ಯೂಯಾರ್ಕ್‌ನಲ್ಲಿ. ಕ್ರಿಸ್ಟಾ ಗಿಲ್ಸ್ ಎಂಬಾತನ ಜತೆಗೆ ಮದುವೆಯೂ ಆಗಿದೆ.

ಅಷ್ಟೇ ಆಗಿದ್ದರೆ ಸುನಂದಾ ಯಾವ ಸುದ್ದಿಗೂ ಗ್ರಾಸ ಆಗುತ್ತಿರಲಿಲ್ಲ. ಈಕೆ ಕೇಂದ್ರದ ವಿದೇಶಾಂಗ ಖಾತೆಯ ರಾಜ್ಯ ಸಚಿವ ಶಶಿ ತರೂರ್ ಅವರ ಗೆಳತಿ ಎಂದೇ ಈಗ ಇಷ್ಟೆಲ್ಲ ಪುಕಾರು. ಸಚಿವರು ಈಕೆಯನ್ನು ಮದುವೆಯೂ ಆಗುತ್ತಾರೆಂಬ ಗಾಳಿಸುದ್ದಿ ಹಬ್ಬಿದೆ. (ಇಬ್ಬರದ್ದೂ ಈಗಾಗಲೆ ಎರಡು ಮದುವೆಗಳಾಗಿ ಮುರಿದುಬಿದ್ದಿವೆ ಅನ್ನೋದು ಇನ್ನೊಂದು ಸುದ್ದಿ!) ಮದುವೆ ಆಗುವುದಕ್ಕೆ ಯಾರ ಆಕ್ಷೇಪವೂ ಇಲ್ಲ ಬಿಡಿ. ಆದರೆ ಐಪಿಎಲ್ ಕ್ರಿಕೆಟ್ ಲೀಗ್‌ಗೆ ಹೊಸದಾಗಿ ಕೊಚ್ಚಿ ತಂಡವನ್ನು ಸೇರಿಸಿದರಲ್ಲ; ಆ ತಂಡದ ಒಡೆತನದಲ್ಲಿ ಒಂದು ಸಣ್ಣ ಪರ್ಸಂಟೇಜ್ ಈಕೆಯ ಹೆಸರಲ್ಲಿ ಇದೆಯಂತೆ. ಪರ್ಸೆಂಟೇಜ್ ಸಣ್ಣದೇ– ಆದರೆ ಅದು ಹಣದ ರೂಪಕ್ಕೆ ಬಂದಾಗ 70 ಕೋಟಿ ರೂಪಾಯಿ ಆಗುತ್ತದಂತೆ! 'ಸಚಿವರು ಒತ್ತಡ ಹೇರಿಯೇ ಈ ಒಡೆತನ ಕೊಡಿಸಿರಬೇಕು. ತನಿಖೆ ನಡೆಯಲಿ. ಸಚಿವರು ರಾಜೀನಾಮೆ ಕೊಡಲಿ' ಎನ್ನುವುದು ವಿರೋಧ ಪಕ್ಷಗಳ ಹುಯಿಲು.

ಈ ಗುಲ್ಲಿನ ಬಗ್ಗೆ ಸುನಂದಾ ಅವರಿಗೂ ಸಿಟ್ಟಿದೆ. 'ನಾನು ದುಬೈಯಲ್ಲಿ ಬ್ಯೂಟಿಶಿಯನ್ ಉದ್ಯಮ ನಡೆಸುತ್ತಿದ್ದೇನೆ. ನನ್ನ ವ್ಯಕ್ತಿಗತ ವ್ಯವಹಾರಗಳು ಸಾಕಷ್ಟಿವೆ. ಅದರ ಬಗ್ಗೆ ಗೊತ್ತಿಲ್ಲದೆ ಯಾರ್‍ಯಾರೋ, ಏನೇನೋ ಮಾತನಾಡುತ್ತಿದ್ದಾರೆ' ಎಂದು ಸುನಂದಾ ಪುಷ್ಕರ ಕಿಡಿ ಕಾರಿದ್ದಾರೆ. ಮಾಧ್ಯಮಗಳಿಗಂತೂ ಪುಷ್ಕಳ ಭೋಜನ!

■

# ಇನ್ನೊಬ್ಬ ಮೋದಿ!



ಈಗಾಗಲೆ ಇರುವ ಒಬ್ಬ ಮೋದಿ (ನರೇಂದ್ರ ಮೋದಿ)ಯವರ ಸುದ್ದಿ–ವಿವಾದಗಳನ್ನು ಅರಗಿಸಿಕೊಳ್ಳುವುದೇ ಕಷ್ಟವಾಗಿದೆ. ಅಂಥಾದ್ದರಲ್ಲಿ ಈಗ ಇನ್ನೊಬ್ಬ ಮೋದಿ ಮಾಧ್ಯಮಗಳಲ್ಲಿ ಸಖತ್ ಮಿಂಚುತ್ತಿದ್ದಾರೆ. ಅವರೇ ಲಲಿತ್ ಮೋದಿ. ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಜನಪ್ರಿಯವಾಗಿದ್ದೇ ಲಲಿತ್ ಮೋದಿ ಮೌಲ್ಯ ಆಕಾಶಕ್ಕೇರಿದೆ. ಜತೆಗೆ ವಿವಾದಗಳೂ ಹುತ್ತವೂ ಬೆಳೆಯತೊಡಗಿದೆ.

ಶ್ರೀಮಂತ ಉದ್ಯಮಿಯ ಮಗ ಲಲಿತ್ ಮೋದಿ ಐಪಿಎಲ್ ಅಧ್ಯಕ್ಷ. ಕೊಚ್ಚಿ ತಂಡವನ್ನು ಖರೀದಿಸಿದ ವಿಷಯದಲ್ಲಿ ಕೇಂದ್ರ ಸಚಿವ ಶಶಿ ತರೂರ್ ಜತೆ ಮೋದಿಯ ಜಗಳ ಈಗ ತಾರಕಕ್ಕೆ ಏರಿದೆ. ಕೊಚ್ಚಿ ತಂಡದ ಖರೀದಿಯಲ್ಲಿ ತರೂರ್ ವಿಶೇಷ ಆಸಕ್ತಿ ವಹಿಸಿದ್ದು ಎಲ್ಲರಿಗೂ ಗೊತ್ತು. 'ಕೊಚ್ಚಿ ತಂಡದಲ್ಲಿ ನನ್ನ ಹಣಕಾಸು ಪಾಲು ಇಲ್ಲ. ರಾಜ್ಯಕ್ಕೆ ಹೆಸರು ಬರಲಿ ಎಂದು ಓಡಾಡಿದೆ' ಎನ್ನುತ್ತಾರೆ ಶಶಿ ತರೂರ್. ಆದರೆ ಲಲಿತ್ ಮೋದಿ, ಟ್ವಿಟರ್ ಜಾಲದಲ್ಲಿ ಕೊಚ್ಚಿ ಖರೀದಿದಾರರ ಹೆಸರು ಪ್ರಕಟಿಸಿ ತರೂರ್‌ಗೆ ಸವಾಲೆಸೆದಿದ್ದಾರೆ. ಜಗಳ ಏನೇ ಆದರೂ ಮೋದಿ ಈಗ ಸ್ಟಾರ್. ಟೀವಿಯಲ್ಲಿ, ಪಂದ್ಯ ನಡೆಯುವಲ್ಲಿ ಪ್ರತಿ ದಿನ ಮೋದಿಯದ್ದೇ ಮುಖ!

ಮೋದಿ ಉದ್ಯಮಗಳ ಮೇಲೆ ಇತ್ತೀಚೆಗೆ ಆದಾಯ ತೆರಿಗೆ ದಾಳಿಯೂ ನಡೆದಿದೆ. ಐಪಿಎಲ್ ಮೂಲಕ ಮೋದಿ ಭಾರೀ ಬೇನಾಮಿ ದುಡ್ಡು ಮಾಡುತ್ತಿದ್ದಾರೆ ಎಂಬ ಆರೋಪವೂ ಇದೆ. ಜತೆಗೆ 'ಈ ಹಿಂದೆ ವಿದೇಶದಲ್ಲಿ ಇದ್ದಾಗ, ಲಲಿತ್ ಮೋದಿ 400 ಗ್ರಾಂ ಕೊಕೇನ್ ಹೊಂದಿದ್ದು, ಹಲ್ಲೆ ಮತ್ತು ಅಪಹರಣ ಪ್ರಕರಣದಲ್ಲಿ ಎರಡು ವರ್ಷ ಜೈಲು ಶಿಕ್ಷೆ ಕೂಡಾ ಅನುಭವಿಸಿದ್ದರು' ಎಂಬ ಆರೋಪವೂ ಕೇಳಿಬಂದಿದೆ.

ಹಾಗೆ ನೋಡಿದರೆ ಐಪಿಎಲ್ ಕ್ರಿಕೆಟ್‌ನ ಮೂಲ ಐಡಿಯಾ ಝೀ ಟೀವಿಯ ಸುಭಾಶ್‌ಚಂದ್ರ ಅವರದ್ದು. ಬಿಸಿಸಿಐ ದೊಡ್ಡಸ್ತಿಕೆಗೆ ಎದುರೇಟು ನೀಡಲು ಅವರು ಹುಟ್ಟು ಹಾಕಿದ ಇಂಡಿಯನ್ ಕ್ರಿಕೆಟ್ ಲೀಗ್ (ಐಸಿಎಲ್) ಅಧ್ಯಕ್ಷರಾಗಿ ಕಪಿಲ್‌ದೇವ್ ಆಯ್ಕೆಯಾಗಿದ್ದರು. ಅದೇ ಐಡಿಯಾವನ್ನು ಲಲಿತ್ ಮೋದಿ ಹೈಜಾಕ್ ಮಾಡಿದ್ದು. ಈಗ ಕಪಿಲ್‌ರನ್ನು ಕೇಳುವವರೇ ಇಲ್ಲ. ಮೋದಿಯ ಹಣಬಲ ಮತ್ತು ವ್ಯಾಪಾರಿ ಬುದ್ಧಿ ಆತನನ್ನು ಸ್ಟಾರ್‌ಮೇಕರ್ ಆಗಿಸಿದೆ.

■